**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಸ್ಪೆಷಲ್ ಕೇಸ್ ಸಂಖ್ಯೆಃ 501/2025**

ಫಿರ್ಯಾದುದಾರರು : ಸರ್ಕಾರದ ಪರವಾಗಿ ಬೈಂದೂರು ಪೋಲೀಸರು

ವಿರುದ್ಧ

ಆರೋಪಿತರು : ಸುಬ್ರಾಯ ಶೇರುಗಾರ್ ಮತ್ತು ಇತರರು

**ದೋಷಾರೋಪಣೆ**

ಶ್ರೀ ಅಬ್ದುಲ್ ರಹೀಮ್ ಹುಸೇನ್ ಶೇಖ್, ಬಿ.ಎಸ್‌ಸಿ., ಬಿ.ಇಡಿ., ಎಲ್‌ಎಲ್.ಬಿ. (ಸ್ಪೆಷಲ್), ಕುಂದಾಪುರದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶನಾದ ನಾನು

1. ಸುಬ್ರಾಯ ಶೇರುಗಾರ್
   ತಂದೆಃ ದಿ. ಗೋವಿಂದ ಶೇರುಗಾರ್
   ವಯಸ್ಸುಃ **72** ವರ್ಷ,
   ವಾಸಃ ಸೋಡಿತಾರ್ ಹೌಸ್,
   ಸೋಮೇಶ್ವರ ರೋಡ್
   ಪಡುವರಿ ಗ್ರಾಮ, ಬೈಂದೂರು ತಾಲೂಕು.

2. ನಾರಾಯಣ ಶೇರುಗಾರ್
   ತಂದೆಃ ದಿ. ಗೋವಿಂದ ಶೇರುಗಾರ್
   ವಯಸ್ಸುಃ **68** ವರ್ಷ,
   ವಾಸಃ ಸೋಡಿತಾರ್ ಹೌಸ್,
   ಸೋಮೇಶ್ವರ ರೋಡ್
   ಪಡುವರಿ ಗ್ರಾಮ, ಬೈಂದೂರು ತಾಲೂಕು.

3. ಗಣಪತಿ ಶೇರುಗಾರ್
   ತಂದೆಃ ಸುಬ್ರಾಯ ಶೇರುಗಾರ್
   ವಯಸ್ಸುಃ **45** ವರ್ಷ,
   ವಾಸಃ ಸೋಡಿತಾರ್ ಹೌಸ್, ವನಕೋಡ್ಲು,

ಮಹಾಲಿಂಗೇಶ್ವರ ದೇವಸ್ಥಾನದ ಹತ್ತಿರ,
ಗಂಗನಾಡು, ಬೈಂದೂರು ಗ್ರಾಮ ಮತ್ತು ತಾಲೂಕು.

ನಿಮ್ಮ – ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1) ರವರು ಬೈಂದೂರು ತಾಲೂಕು, ಪಡುವರಿ ಗ್ರಾಮದ ಮಾವಿನಕುಳಿ ಎಂಬಲ್ಲಿರುವ ಚಾಸಾ.2 ರವೀಂದ್ರ ಶೇರಿಗಾರ್ ರವರ ಪತ್ನಿ ಚಾಸಾ.5 ಶ್ರೀಮತಿ ಜ್ಯೋತಿ ರವೀಂದ್ರ ರವರ ಬಾಬ್ತು ಸರ್ವೇ ನಂಬ್ರ 103/14 ರಲ್ಲಿ 0.30 ಎಕ್ರೆ ಜಾಗವನ್ನು ಖರೀದಿಸಲು ನಿರ್ಧರಿಸಿದಂತೆ ಸದ್ರಿ ಜಾಗದ ಗಡಿಗುರುತು ಮಾಡಿಕೊಡುವಂತೆ ಚಾಸಾ.5 ಶ್ರೀಮತಿ ಜ್ಯೋತಿ ರವೀಂದ್ರ ರವರು ಅರ್ಜಿ ಕೊಟ್ಟಿದ್ದು, ಅದರಂತೆ ಸದ್ರಿ ಸ್ಥಳದ ಸರ್ವೇ ಕಾರ್ಯವನ್ನು ಮಾಡಲು ಸರ್ವೇ ಇಲಾಖೆಯಿಂದ ದಿನಾಂಕಃ16-11-2024 ರಂದು ದಿನ ನಿಗದಿಗೊಳಿಸಿದ ಬಗ್ಗೆ ಚಾಸಾ.2 ರವೀಂದ್ರ ಶೇರಿಗಾರ್ ರವರು ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1) ರವರಿಗೆ ತಿಳಿಸಿದಂತೆ ಫಿರ್ಯಾದಿದಾರರು ಬೈಂದೂರು ತಾಲೂಕು, ಪಡುವರಿ ಗ್ರಾಮದ ಮಾವಿನಕುಳಿ ಎಂಬಲ್ಲಿರುವ ಸದ್ರಿ ಜಾಗಕ್ಕೆ ಬೆಳಿಗ್ಗೆ ಬಂದು ಅಲ್ಲಿಗೆ ಚಾಸಾ.3 ಚಂದ್ರಶೇಖರ ಗುಲ್ವಾಡಿ ಮತ್ತು ಚಾಸಾ.4 ನಾಗರಾಜ ಕೆಂಚನೂರು ರವರು ಫಿರ್ಯಾದಿದಾರರ ಸೂಚನೆಯಂತೆ ಬೇಲಿ ಹಾಕಲು ಕೆಲಸದವರನ್ನು ಕರೆದುಕೊಂಡು ಬಂದಿದ್ದು, ಸರ್ವೇ ಅಧಿಕಾರಿಯವರಾದ ಚಾಸಾ.8 ಶಿವಕುಮಾರ್ ರವರು ಸರ್ವೇ ಮಾಡಲು ಮುಂದಾದಾಗ ಸಮಯ ಸುಮಾರು ಬೆಳಿಗ್ಗೆ 10.30 ಗಂಟೆಗೆ ನೀವೆಲ್ಲರೂ (ಆರೋಪಿತರು) ಬಂದು ಸರ್ವೇ ಮಾಡಲು ಆಕ್ಷೇಪಿಸಿ ಮಣ್ಣು ರಸ್ತೆಯ ಮೇಲೆ ನಿಂತುಕೊಂಡಿದ್ದ ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1) ರವರಿಗೆ ಮುಂದೆ ಹೋಗಲು ಬಿಡದೆ ಅಕ್ರಮವಾಗಿ ತಡೆದು ನಿಲ್ಲಿಸಿ ಕಲಂ 126(2) ಸಹಕಲಂ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಎರಡನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವೆಲ್ಲರೂ ಸೇರಿ ಸದ್ರಿ ಸ್ಥಳದ ಸರ್ವೇ ಮಾಡಲು ಆಕ್ಷೇಪಿಸಿ ಮಣ್ಣು ರಸ್ತೆಯ ಮೇಲೆ ನಿಂತುಕೊಂಡಿದ್ದ ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1) ರವರಿಗೆ ಮುಂದೆ ಹೋಗಲು ಬಿಡದೆ ಅಕ್ರಮವಾಗಿ ತಡೆದು ನಿಲ್ಲಿಸಿ ಫಿರ್ಯಾದಿದಾರರನ್ನುದ್ದೇಶಿಸಿ "ಈ ಭಾಗದಲ್ಲಿ ಎಲ್ಲರೂ ಶೇರುಗಾರ್ ಜಾತಿಯವರೇ ಇದ್ದಾರೆ, ನಿಮ್ಮ ಜಾತಿಯವರ ಅಗತ್ಯ ಈ ಜಾಗದಲ್ಲಿ ಇರುವುದಿಲ್ಲ, ನೀವು ಕೂಸಾಳು ಜಾತಿಯವರು, ನಿಮ್ಮ ಕಾಲೋನಿ ಎಲ್ಲಿದೆಯೋ ಅಲ್ಲಿಗೆ ಹೋಗಿ ಜಾಗ ಖರೀದಿ ಮಾಡಿ ಇಲ್ಲಿನ ಜಾಗವನ್ನು ಖರೀದಿಸಲು ನಿಮ್ಮ ಜಾತಿಯವರಿಗೆ ಬಿಡುವುದಿಲ್ಲ" ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ ಸಾರ್ವಜನಿಕ ಶಾಂತತೆಗೆ ಭಂಗ ತರಲು ಪ್ರಚೋದನೆ ನೀಡಿ ಕಲಂ 352 ಸಹಕಲಂ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೂರನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವೆಲ್ಲರೂ ಸೇರಿ ಸದ್ರಿ ಸ್ಥಳದ ಸರ್ವೇ ಮಾಡಲು ಆಕ್ಷೇಪಿಸಿ ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1) ರವರಿಗೆ "ಇಲ್ಲಿನ ಜಾಗವನ್ನು ಖರೀದಿಸಲು ನಿಮ್ಮ ಜಾತಿಯವರಿಗೆ ಬಿಡುವುದಿಲ್ಲ, ಹಾಗಿದ್ದರೂ ಕೂಡಾ ನೀವು ಜಾಗವನ್ನು ಖರೀದಿಸಲು ಮುಂದಾದರೆ ನಿನ್ನನ್ನು ಕೊಲೆ ಮಾಡಿಸುತ್ತೇವೆ" ಎಂದು ಜೀವ ಬೆದರಿಕೆ ಹಾಕಿ ಕಲಂ 351(2) ಸಹಕಲಂ 3(5) ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಕೊನೆಯದಾಗಿ ನೀವೆಲ್ಲರೂ (ಆರೋಪಿತರು) ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1) ರವರು ಪರಿಶಿಷ್ಟ ಜಾತಿ (ಆದಿ ದ್ರಾವಿಡ)ಗೆ ಸೇರಿದವರು ಎನ್ನುವುದು ಗೊತ್ತಿದ್ದರೂ ಸಹಾ ಚಾಸಾ.2 ರವೀಂದ್ರ ಶೇರಿಗಾರ್ ರವರ ಪತ್ನಿ ಚಾಸಾ.5 ಶ್ರೀಮತಿ ಜ್ಯೋತಿ ರವೀಂದ್ರ ರವರ ಬಾಬ್ತು ಪಡುವರಿ ಗ್ರಾಮದ ಸರ್ವೇ ನಂಬ್ರ 103/14 ರಲ್ಲಿ 0.30 ಎಕ್ರೆ ಜಾಗವನ್ನು ಪರಿಶಿಷ್ಟ ಜಾತಿಗೆ ಸೇರಿದ ಫಿರ್ಯಾದಿ ಸತೀಶ್ ಕಂಚುಗೋಡು (ಚಾಸಾ.1)ರವರು ಖರೀದಿಸಬಾರದು ಎಂಬ ಉದ್ದೇಶದಿಂದ ಫಿರ್ಯಾದಿದಾರರಿಗೆ ಹಾಗೂ

ಫಿರ್ಯಾದಿದಾರರು ಕರೆದುಕೊಂಡು ಬಂದ ಕೆಲಸದವರಿಗೆ "ನಿಮ್ಮ ಕೂಸಾಳು ಜಾತಿಯವರು ಕಾಗೆಗಳ ಹಾಗೆ ಗುಂಪು ಕಟ್ಟಿಕೊಂಡು ಬರುವವರು" ಎಂದು ಏರುಧ್ವನಿಯಲ್ಲಿ ಕೂಗಾಡಿ ನಿಮ್ಮ ಜೊತೆಯಲ್ಲಿ ಬಂದಿದ್ದ ಕಾನೂನಿನೊಡನೆ ಸಂಘರ್ಷಕ್ಕೆ ಇಳಿದ ಬಾಲಕ ಆತನ ಕೈಯಲ್ಲಿದ್ದ ಮೊಬೈಲ್ ನಿಂದ ಫಿರ್ಯಾದಿದಾರರ ಫೋಟೋವನ್ನು ತೆಗೆದು "ನಮ್ಮವರ ಜಮೀನನ್ನು ನಿಮ್ಮ ಜಾತಿಯವರು ಖರೀಸಲು ಬಂದಿದ್ದಾರೆ ಎಂದು ನಮ್ಮವರಿಗೆ ಮತ್ತು ಕುಟುಂಬದವರಿಗೆ ಹೇಳಿ ಈಗ ತೆಗೆದ ಫೋಟೋವನ್ನು ಅವರಿಗೆ ಕೊಟ್ಟು ನಿಮ್ಮನ್ನು ಕೊಲೆ ಮಾಡಿಸುತ್ತೇನೆ" ಎಂದು ಬೆದರಿಕೆ ಹಾಕಿ ಫಿರ್ಯಾದಿದಾರರಿಗೆ ಮತ್ತು ಕೆಲಸದವರಿಗೆ ರಸ್ತೆಯಲ್ಲಿಯೂ ಕೂಡಾ ನಿಲ್ಲಲು ಬಿಡದೇ "ನೀವ್ಯಾರು ಇನ್ನು ಮುಂದಕ್ಕೆ ಈ ಜಾಗಕ್ಕೆ ಬರಲು ಹೆದರಬೇಕು ಆ ರೀತಿಯಲ್ಲಿ ಪೋಲೀಸ್ ಠಾಣೆಗೆ ದೂರು ಕೊಟ್ಟು ಸುಳ್ಳು ಪ್ರಕರಣ ದಾಖಲಿಸುತ್ತೇವೆ ನಮಗೆ ರಾಜಕೀಯ ಬೆಂಬಲ ಇದೆ ಎಂದು ಹೆದರಿಸಿ ಫಿರ್ಯಾದಿದಾರರಿಗೆ ಜಾತಿ ತಾರತಮ್ಯ ಮಾಡಿ ಕಲಂ 3(1)(r)(s), 3(2)(v-a), ಪರಿಶಿಷ್ಟ ಜಾತಿ/ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ವಿಚಾರಣೆಗೆ ಒಳಪಡಿಸಲು ಆದೇಶಿಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರವನ್ನು ದೃಢೀಕರಿಸಲಾಗಿದೆ.

**ದಿನಾಂಕಃ 11-07-2025**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕುಂದಾಪುರ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಸ್ಪೆಷಲ್ ಕೇಸ್ ಸಂಖ್ಯೆಃ 501/2025**

**ಫಿರ್ಯಾದುದಾರರು** ಃ ಸರ್ಕಾರದ ಪರವಾಗಿ ಬೈಂದೂರು ಪೊಲೀಸರು

**ವಿರುದ್ಧ**

**ಆರೋಪಿ** ಃ **1.** ಸುಬ್ರಾಯ ಶೇರುಗಾರ್
ತಂದೆಃ ದಿ. ಗೋವಿಂದ ಶೇರುಗಾರ್
ವಯಸ್ಸುಃ **75** ವರ್ಷ,
ವಾಸಃ ಸೋಡಿತಾರ್ ಹೌಸ್,
ಸೋಮೇಶ್ವರ ರೋಡ್
ಪಡುವರಿ ಗ್ರಾಮ, ಬೈಂದೂರು ತಾಲೂಕು.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಕೇಳಿದ್ದೀರಾ?

ಉತ್ತರಃ Yes

ಪ್ರಶ್ನೆ **2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ Claimed to be tried.

ದಿನಾಂಕಃ **11-07-2025**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕುಂದಾಪುರ

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಸ್ಪೆಷಲ್ ಕೇಸ್ ಸಂಖ್ಯೆಃ 501/2025**

**ಫಿರ್ಯಾದುದಾರರು** ಃ ಸರ್ಕಾರದ ಪರವಾಗಿ ಬೈಂದೂರು ಪೊಲೀಸರು

**ವಿರುದ್ಧ**

**ಆರೋಪಿ** ಃ **2.** ನಾರಾಯಣ ಶೇರುಗಾರ್
ತಂದೆಃ ದಿ. ಗೋವಿಂದ ಶೇರುಗಾರ್
ವಯಸ್ಸುಃ **68** ವರ್ಷ,
ವಾಸಃ ಸೋಡಿತಾರ್ ಹೌಸ್,
ಸೋಮೇಶ್ವರ ರೋಡ್
ಪಡುವರಿ ಗ್ರಾಮ, ಬೈಂದೂರು ತಾಲೂಕು.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಕೇಳಿದ್ದೀರಾ?

ಉತ್ತರಃ Yes

ಪ್ರಶ್ನೆ **2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ Claimed to be tried.

ದಿನಾಂಕಃ **11-07-2025**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕುಂದಾಪುರ

## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ

**ಸ್ಪೆಷಲ್ ಕೇಸ್ ಸಂಖ್ಯೆಃ 501/2025**

**ಫಿರ್ಯಾದುದಾರರು** ಃ ಸರ್ಕಾರದ ಪರವಾಗಿ ಬೈಂದೂರು ಪೊಲೀಸರು

**ವಿರುದ್ಧ**

**ಆರೋಪಿ** ಃ **3.** ಗಣಪತಿ ಶೇರುಗಾರ್
ತಂದೆಃ ಸುಬ್ರಾಯ ಶೇರುಗಾರ್
ವಯಸ್ಸುಃ **45** ವರ್ಷ,
ವಾಸಃ ಸೋಡಿತಾರ್ ಹೌಸ್, ವನಕೋಡ್ಲು,
ಮಹಾಲಿಂಗೇಶ್ವರ ದೇವಸ್ಥಾನದ ಹತ್ತಿರ,
ಗಂಗನಾಡು, ಬೈಂದೂರು ಗ್ರಾಮ ಮತ್ತು ತಾಲೂಕು.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಕೇಳಿದ್ದೀರಾ?

ಉತ್ತರಃ Yes

ಪ್ರಶ್ನೆ **2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ Claimed to be tried.

ದಿನಾಂಕಃ **11-07-2025**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕುಂದಾಪುರ